**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು**
**ಸಿ.ಸಿ.ನಂ. 3963/2021**

**CW-13/PW-8**

ಸಾಕ್ಷಿದಾರನ ಹೆಸರು ಃ ಡಾ/ವಸೀಮಿಯಾ
ತಂದೆ ಹೆಸರು ಃ ಬಶೀರುದ್ದೀನ್
ವಯಸ್ಸು ಃ 40
ಉದ್ಯೋಗ ಃ ವೈದ್ಯರು
ವಿಳಾಸ ಃ ರಾಯಚೂರು ರಿಮ್ಸ ಆಸ್ಪತ್ರೆ

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 25-01-2025**

ನಾನು 2010 ರಿಂದ ಇಲ್ಲಿವರೆಗೆ ರಾಯಚೂರು ರಿಮ್ಸ ಆಸ್ಪತ್ರೆಯಲ್ಲಿ ವೈದ್ಯರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ

ದಿನಾಂಕ 24.03.2021 ರಂದು ಮಧ್ಯಾಹ್ನ 12.40 ಗಂಟೆಗೆ ನಾನು ಆಸ್ಪತ್ರೆಯಲ್ಲಿ ಇದ್ದಾಗ ಚಾಸಾ-1 ರವರು ಹೊಡೆದಾಟದ ಹಿನ್ನಲೆಯಲ್ಲಿ ಚಾಸಾ-4 ರವರ ಜೊತೆ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ತಲೆಯ ಮೇಲೆ ನೋವು ಮತ್ತು ಬಾವು ಇರುತ್ತದೆ
2. ಸೊಂಟದಲ್ಲಿ ನೋವು ಇರುತ್ತದೆ.
3. ತಲೆಯ ಸಿಟಿ ಸ್ಕ್ಯಾನ್ ಮಾಡಿದ್ದು ರಕ್ತ ಸ್ರಾವ ಕಂಡು ಬಂದಿರುತ್ತದೆ.

1 ನೇ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು ಸದರಿ ಗಾಯಾಳುವಿಗೆ ಪರೀಕ್ಷಿಸಿ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಸಾಕ್ಷಿ ಗಾಯದ ಪ್ರಮಾಣ ಪತ್ರದ ಮೇಲೆ ಇದ್ದ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ನಿಪಿ-8 ರಲ್ಲಿ ನಮೂದು ಮಾಡಿದ ಗಾಯಗಳು ಸಾದಾರಣವಾಗಿ ಯಾವುದೇ ವ್ಯಕ್ತಿಗಳು ಕಟ್ಟಿಗೆಯಿಂದ ಜಗಳದಲ್ಲಿ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಎಸ್.ಹೆಚ್ ವಕೀಲರಿಂದಃ**

ನಿಪಿ-8 ರಲ್ಲಿ ಹಲ್ಲೆ ಮಾಡಿದ ದಿನಾಂಕ 21.03.2021 ಅಂತ ಗಾಯಾಳು ಹೇಳಿರುತ್ತಾನೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಚಾಸಾ-1 ರವರು ದಿನಾಂಕ 24.03.2021 ರಂದು ಆಸ್ಪತ್ರೆಗೆ ದಾಖಲಾಗಿರುತ್ತಾನೆ ಎಂದರೆ ಸರಿ. ನಿಪಿ-8 ರಲ್ಲಿ 24 ತಾಸು ಒಳಗೆ ಆಗುವಂತಹ ಗಾಯಗಳು ಇರುತ್ತವೆ ಎಂದು ಸಾಧ್ಯತೆ ಇರುತ್ತದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ-8 ರಲ್ಲಿ ನಮೂದು ಮಾಡಿದ ಗಾಯಗಳು ದ್ವಿಚಕ್ರ ವಾಹನ ಬಂದು ಡಿಕ್ಕಿ ಮಾಡಿದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ-1 ರವರು ಆಸ್ಪತ್ರೆಗೆ ಬಂದಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ,**
**ರಾಯಚೂರು.**